**ಡಿ.ಡಬ್ಲ್ಯೂ-1**

**ದಿಃ 25.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ವಾದಿ ಪರ ಶ್ರೀ P.S.P. ವಕೀಲರಿಂದ**

ನನ್ನ ವಕೀಲರಿಗೆ ತಕರಾರು ತಯಾರಿಸಲು ನಾನೇ ಮಾಹಿತಿ ಕೊಟ್ಟಿದ್ದೇನೆ. ವಾದಿಗಳು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇನೆ. ದಾವಾ ಸ್ವತ್ತಿಗೆ ವಿದ್ಯುಚ್ಛಕ್ತಿ ಮತ್ತು ಆಸ್ತಿ ತೆರಿಗೆ ವಾದಿ ಪಾವತಿ ಮಾಡುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನೇ ವಾಸ ಮಾಡುತ್ತಿದ್ದೇನೆ. ದಾವಾ ಸ್ವತ್ತು ಅಂಗಡಿಯಾಗಿರುತ್ತದೆ. OS No.619/2009 ರ ಪ್ರಕರಣವನ್ನು ನಾನು ಹಾಕಿದ್ದೆ ಎಂದರೆ ಸರಿ. ಸದರಿ ಪ್ರಕರಣದಲ್ಲಿದ್ದ ಆಸ್ತಿ ಹಾಗೂ ಈ ಪ್ರಕರಣದ ಆಸ್ತಿ ಎರಡು ಒಂದೇ ಎಂದರೆ ಸರಿ. OS No.619/2009 ನ್ನು ದಾವಾ ಸ್ವತ್ತಿನ ಸ್ವಾಧೀನ ಕೋರಿ ದಾಖಲು ಮಾಡಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ಮಹಾನಗರ ಪಾಲಿಕೆ ವಿರುದ್ಧ ಹಾಕಿದ್ದೆ ಎಂದರೆ ಸರಿ. ನಾನು ಕೇಸು ಹಾಕಿದಾಗ ಮಹಾನಗರ ಪಾಲಿಕೆ ಸ್ವಾಧೀನದಲ್ಲಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆ ಹಾಕಿದಾಗ ವಾದಿ ಸ್ವಾಧೀನದಲ್ಲಿದ್ದರು ಎಂದರೆ ಸರಿ. ವಾದಿ ಸ್ವಾಧೀನದಲ್ಲಿದ್ದರು ಸಹ ಸದರಿ ಪ್ರಕರಣದಲ್ಲಿ ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ.

OS No.619/2009 ನ್ನು ಡಿಕ್ರಿ ಆದನಂತರ, ನಾನು ಜಾರಿ ಅರ್ಜಿ ಸಂಖ್ಯೆ 158/2017 ಹಾಕಿದ್ದೆ ಎಂದರೆ ಸರಿ. ಸದರಿ ಜಾರಿ ಅರ್ಜಿಯನ್ನು ದಿನಾಂಕ 14.11.2024 ನಾನು ಮುಂದುವರಿಸರಲಿಲ್ಲ ಎಂದು ವಾಪಸು ಪಡೆದುಕೊಂಡಿದ್ದೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಮಲು ಜಾರಿ ಅರ್ಜಿಯಲ್ಲಿ ನಾನು ವಾದಿಯನ್ನು ಪಕ್ಷಗಾರರನಾನಗಿ ಮಾಡಿಲ್ಲ ಎಂದರೆ

ಸರಿ. ವಾದಿ ಸ್ವಾಧೀನದಲ್ಲಿದ್ದರು ಸಹ ಉದ್ದೇಶಪೂರ್ವಕವಾಗಿ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ.

Sd/-

1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಬೆಳಗಾವಿ.